124 (2)

"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 25 | ಶನಿವಾರ 13—10—45 | ಬೆಲೆ ಪ್ರತಿ 3 ಪೈ

ಆಂಗ್ಲೋ ಜಾವಾನಿಗಳ ಹೊಡೆದಾಟ

ಜಾವಾನಿಗಳಿಗೂ ಬ್ರಿಟಿಷರಿಗೂ ಹೊಡೆದಾಟವಾಗಿ ಸ್ವಲ್ಪ ಸಾವು ನೋವು ಉಂಟಾಗಿದೆ. ಮಿತ್ರ ಸೇನಾ ನಾಳವು ಜಾವಾ ಕಡೆಗೆ ಕಳುಹಿಸಲಾಗಿದೆ.

ಮಾರ್ಕೆಟ್ ಪ್ರದರ್ಶನ

ಸಚಿವರು ಆಗಮಿಸಿದ್ದರು

(ಮಾರ್ಕೆಟ್ ಬಾತ್ಮಿಯಿಂದ)

ಮೈಸೂರು ಅ 13

ರಾಜಧಾನಿಯ ಮಾರ್ಕೆಟ್ ಪ್ರದರ್ಶನ ಈ ಬೆಳಿಗ್ಗೆ ಎಂಟೂವರೆ ಘಂಟೆಗೆ ಆರಂಭವಾಯಿತು. ಆರೋಗ್ಯ ಸಚಿವರಾದ ಡಾ || ರಾಯಕ್ಕಾನವರೂ, ಶ್ರೀ ಜೆ. ಬಿ. ವಲ್ಲಾರಾಧ್ಯರೂ, ಫಕ್ಕಿ ಶ್ರೀ ಹೆಚ್.ಎಲ್. ವೀರಸೂಜಿ ಅರಸನವರೂ, ಪತ್ರಿಕೋದ್ಯೋಗಿಗಳೂ, ಪೌರಸಹಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಾಂಭೋರೆಯವರೂ, ಉಪಾಧ್ಯಕ್ಷರಾದ ಶ್ರೀ ವೆಂಕಟರವಣಯ್ಯನವರೂ ಮತ್ತು ನಗರ ಪಿತೃಗಳೂ ಆಗಮಿಸಿದ್ದರು.

ಮಾರ್ಕೆಟ್ ತಳಿರು ತೋರಣಗಳಿಂದ ಅಲಂಕೃತವಾಗಿದ್ದಿತು. ಸುಶ್ರಾವ್ಯವಾದ ಓಲಗವು ಮಂಗಳ ಪೂರ್ವಕವಾಗಿ ಏರ್ಪಾಡಾಗಿದ್ದಿತು. ಫಲಪುಷ್ಪಗಳ ಪ್ರದರ್ಶನವು ನಯನ ಮನೋಹರವಾಗಿದ್ದಿತು. ತಂಕಾರಿ ಮಾರುವ ಅಂಗಡಿಗಳ ಹತ್ತಿರ ಧಸರುವಾನಿ ಚಪ್ಪರವನ್ನು ನಿರ್ಮಿಸಿರುವರು. ಆದರ ಒಳಭಾಗದಲ್ಲಿ ಭೂತಧ್ವನಿಸಂತ್ರವನ್ನು ಇಟ್ಟಿರುವರು. ಅಂಗಡಿಗಳವರು ತಮ್ಮ ಕೈಲಾದಷ್ಟು ಉತ್ತಮವಾಗಿ ಕಾಣಿಸಿದ್ದರು. ಡಿಜಿರಾತಿ ಭಕ್ಷ್ಯಾದಿಯವರು ಕೆಲವು ಅಂಗಡಿಗಳಿಗೆ ಪಲಹೆಯನ್ನಿತ್ತರು. ಪ್ರೇಕ್ಷಕರೂ ಹಚ್ಚು ಸಂಖ್ಯೆಯಲ್ಲಿ ಬಂದಿದ್ದರು. ಉತ್ತಮ ಪ್ರದರ್ಶಕರಿಗೆ ಈ ಸಂಜೆ ಶ್ರೀ ಗೋಪಾಲಸ್ವಾಮಯ್ಯಂಗಾರ್ಯರು ಬಹುಮಾನ ಹಂಚುವರು.

.....

ರಾಜಧಾನಿ

ಸ್ಪೆಂ. ಸು.] ಮೈಸೂರು, ಅ 13

ಜಿಲ್ಲಾಧಿಕಾರಿಗಳ ಸಭೆ

ಈ ದಿವಸ ಬೆಳಿಗ್ಗೆ ದಿವಾನರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆದು ಜಿಲ್ಲಾ ವಿಷಯಗಳನ್ನು ಚರ್ಚಿಸಿದರು.

ಆಗಮನ

ಪಾಕೀಸ್ತಾನದ ಸಲಹೆಗಾರರಾದ ಡಾಕ್ಟರ್ ಸಯ್ಯದ್ ಅಹ್ಮದ್ ಲತೀಫ್ ರಾಜಧಾನಿಗೆ ಆಗಮಿಸಿರುವರು.

32 ನೇ ಅಧಿವೇಶನ

ಬಿ ಆರ್ . ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ಮೈಸೂರು ಸಹಕಾರಿಸಂಘದ 32 ನೇ ಅಧಿವೇಶನವು ಸಹಕಾರ ಸಂಘ ಭವನದಲ್ಲಿ ಈ ದಿವಸದಿಂದ ಆರಂಭವಾಯಿತು.

ರಜಾ ಮಂಜೂರಾತಿ

ವಿದ್ಯಾ ಕಾರ್ಯದರ್ಶಿ ಶ್ರೀ ಹಿರಣ್ಣಯ್ಯನವರಿಗೆ ಒಂದು ತಿಂಗಳು ರಜಾ ಮಂಜೂರಾತಿಯಾಗಿದೆ.

ಪ್ರ. ಪ್ರ. ಸಭೆ

ಮೈಸೂರು ಅ 13 — ಈ ದಿವಸ 12 ಘಂಟೆಗೆ ದಿವಾನರವರ ಅಧ್ಯಕ್ಷತೆಯಲ್ಲಿ ಸಭೆಯು ಆರಂಭವಾಯಿತು

ರಸ್ತೆ ದುರಸ್ತುಗಳಿಗೆ ಸಂಬಂಧಿಸಿದ ಪ್ರಶ್ನೋಪ ಪ್ರಶ್ನೆಗಳಿಗೆ, ಸೂಕ್ತಕಾರ್ಯಕ್ರಮ ಕೈಗೊಳ್ಳುವುದಾಗಿ ಸರ್ಕಾರ ತಿಳಿಸಿತು.

ಮಲೇರಿಯಾ ನಿರೋಧಕ್ಕೆ ಸಂಬಂಧಿಸಿದ ಪ್ರಶ್ನೋಪಪ್ರಶ್ನೆಗಳಿಗೆ ಉಪಯುಕ್ತ ಕಾರ್ಯಕ್ರಮ ಪಾಲಿಸುವುದಾಗಿ ಸಂಬ್ಕರ ಉತ್ತರಕೊಟ್ಟಿತು.

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಮಲ್ಲಾರಾಧ್ಯರು ವಿವರಣೆ ಕೊಡುತ್ತಿರುವರೆಂದು ಶ್ರೀ ಗುಪ್ತರು ಕ್ರಿಯಾಲೋಪವನ್ನು ತಂದರು.

ಕೋಲಾರ ಜಿಲ್ಲೆಯಲ್ಲಿ ಕ್ಷಾಮಸೂಚನೆಯಿಲ್ಲವೆಂದು ಮಂಡಿಸಿದ್ದ ನಿಲುವಳಿ ಸೂಚನೆಯನ್ನು ಅನಾವಶ್ಯಕವೆಂದು ದಿವಾ ಅಧ್ಯಕ್ಷರು ನಿರಾಕರಿಸಿದರು

ಮೈಸೂರು ಬೆಂಗಳೂರಿನಲ್ಲಿರುವ ಅದಿ ಕರ್ನಾಟಕ ಕೋಮಿಗೆ ಸುವ್ಯವಸ್ಥೆ ಮಾಡಬೇಕೆಂದು ಶ್ರೀ ಸಿದ್ದಯ್ಯನವರು ಅರಿಕೆ ಮಾಡಿಕೊಂಡರು.

ಕಳೆದ ವರ್ಷ ಕಾಂಗ್ರೆಸ್ ಪಕ್ಷ ಸಭಾ ಪರಿತ್ಯಾಗ ಮಾಡಿದ್ದಕ್ಕಾಗಿ ಆ ದಿನದ ಭಶ್ಯವಸ್ತು ಕಟುವು ಮಾಡಲಾಗಿದ್ದುದನ್ನು ಪ್ರಿವಿಲೇಜ್ ಸಮಿತಿಗೆ ವರದಿ ಮಾಡಲಾಗಿತ್ತು. ಅದರೆ ಪ್ರಿವಿಲೇಜ್ ಸಮಿತಿಯಲ್ಲಿ ಕೋರಂ ಇಲ್ಲದ ಪ್ರಯುಕ್ತ ಆ ವಿಷಯವನ್ನು ಪ್ರತಿನಿಧಿ ಸಭೆಯಲ್ಲೇ ಚರ್ಚಿಸಬೇಕೆಂದು ವಾಪಸು ಕಳಿಸಿರುವರು

300—400 ಮೈಲಿಗಳಷ್ಟು ರಸ್ತೆಗಳನ್ನೂ ಮತ್ತು 22 ಸೇತುವೆಗಳನ್ನೂ ರಚಿಸುವುದಾಗಿ ಶ್ರೀ ಮಲ್ಲಾರಾಧ್ಯರು ಚಿತ್ರದುರ್ಗ ಜಿಲ್ಲಾ ಸಭೆಯ ತ್ರಿವಾರ್ಷಿಕ ಯೋಜನೆಯನ್ನು ಕುರಿತು ಹೇಳಿದರು.

— ನಿನ್ನೆಯ ದಿವಸ ನಾಯಿಯೊಂದು ಸಭೆಯೊಳಕ್ಕೆ ಪ್ರವೇಶಿಸಿತು ಇದಕ್ಕಾಗಿ ಶ್ರೀ ಗುಪ್ತರು ಕ್ರಿಯಾಲೋಪವನ್ನು ತಂದರು.

Stop Press

ಶರಣಾಗುತ್ತಿರುವ ಜಪಾನಿಗಳು ಸತ್ತ ಗೆಳೆಯರ ಬೆರಳನ್ನು ಕತ್ತರಿಸಿಕೊಂಡು ಹೋಗುತ್ತಾರೆ.

ಆಲ್ಬಸೀ ಕೇಂದ್ರ, ಅ 7— ವಿಶ್ವರು ಶರಣಾಗತರಾಗುತ್ತಿರುವ ಜಪಾನಿಗಳು ವಿಚಿತ್ರವಾದ ಸಾನುರಾಗಗಳನ್ನು ತಮ್ಮೊಡನೆ ತರುತ್ತಿದ್ದಾರೆ. ಇಬ್ಬರು ತಮ್ಮ ಗೆಳೆಯರ ಕೈ ಬೆರಳು, ಕಾಲಿನ ಪೆಬ್ಬೆಟ್ಟುಗಳನ್ನು ಕತ್ತರಿಸಿ ತಂದರು. ಇದೇನು ವಿಚಿತ್ರವೆಂದು ಕೇಳಲಾಗಿ ಒಬ್ಬ ಜಪಾನೀ ಅಧಿಕಾರಿ ಎಲ್ಲರನ್ನೂ ಪರಿಸಿದ. ಜಪಾನಿಗಳಲ್ಲಿ ಸತ್ತ ಸಿಪಾಯಿಯ ಕೈಬೆರಳು ಅಥವಾ ಕಾಲಿನ ಹೆಬ್ಬೆಟ್ಟು ಕತ್ತರಿಸಿ ತನ್ನ ದಳಕ್ಕೆ ಕಳುಹಿಸುವುದು ವಾಡಿಕೆ. ಅವನ್ನು ಅವರು ಸುಟ್ಟು, ಅರ್ಧ ಬೂದಿಯ ದ್ದು ಆ ಸಿಪಾಯಿ ಮನೆಯವರಿಗೂ, ಇನ್ನರ್ಧವನ್ನು ಟೋಕಿಯೋದಲ್ಲಿ ಒಂದು ದೇವಸ್ಥಾನಕ್ಕೂ ಕಳಿಸುತ್ತಾರೆ. ಈ ದೇವಾಲಯಕ್ಕೆ ವರ್ಷಕ್ಕೆ ಲಕ್ಷ ಜಪಾನೀ ಜಕ್ಕವರ್ಷಿ ಹೋಗಿ ಸತ್ತ ವೀರರಿಗೆ ತಮ್ಮ ವಂದನೆಯನ್ನರ್ಪಿಸುತ್ತಾರೆ

೪೦ ವರ್ಷಗಳ ತನಕ "ಪಾರ್ಲಿಮೆಂಟ್ ಮೌನ"

ಸುಮಾರು ವರ್ಷಗಳ ಕಾಲ ಪಾರ್ಲಿಮೆಂಟು ಮೆಂಬರಾಗಿ, ಒಂದು ಬಾರಿಯಾದರೂ ಪಾರ್ಲಿಮೆಂಟಿನಲ್ಲಿ ತುಟಿಯಲ್ಲಾಡಿಸದೆ ಇದ್ದ ದಾಖಲೆ ಜ || ಫೌರೆಸ್ಟರ್ ಎಂಬ ಮಹಾಶಯನದು. ಅತನ ತ್ರಿ ವರ್ಷ ಕಾಲ ಪಾರ್ಲಿಮೆಂಟು ಸದಸ್ಯನಾಗಿದ್ದ ದಾಖಲೆ ಸರ್ ಚಾರ್ಲ್ಸ್ ಒಬ್ರೆಲ್ ಎಂಬವನಾದರೂ, ಈ ಸರ್ ಮಹಾಶಯನು ಒಮ್ಮೆ ತನ್ನ ಮೌನವ್ರತವನ್ನು ಭೇದಿಸಿ, ಮನೆಯ ಸ್ತ್ರೀ ಸೇವಕಿಯರು ಕಿಟಕಿಗಳನ್ನು ಸ್ವಚ್ಛ ಪಡಿಸಬಾರದು ಎಂದು ತಂದ ಮನವಿಗೆ ಅಡ್ಡಿ ಮಾತನಾಡಿದ್ದನಂತೆ. ಪಾರ್ಲಿಮೆಂಟಿನಲ್ಲಿ ಇಂತಹ ಅಲಂಕಾರದ ಮೌಂಬರೂ ಇದ್ದಾರೆ. (ಪ್ರ)

ರಾಜಧಾನಿ ಪತ್ರಿಕೋದ್ಯೋಗಿ ಸಂಘ

ನಿನ್ನೆ ದಿವಸ ನಡೆದ ಸ್ಥಳೀಯ ಪತ್ರಿಕೋದ್ಯೋಗಿ ಸಂಘದ ಸಭೆಯಲ್ಲಿ ಜನಪಾಣಿ ವಿಶ್ವಕರ್ನಾಟಕ ಪತ್ರಿಕೆಗಳ ವೀಳೆಲೆ ಸರ್ಕಾರದ ನೋಟಿಸ್ ಜಾರಿಯಾಗಿರುವುದನ್ನು ಖಂಡಿಸಲಾಯಿತ.

ಸೂಚನೆ

ಸೋಮವಾರ ಮಹಾಜನವು ಪ್ರಯುಕ್ತ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ

ಮ್ಯಾನೇಜರ್

ಪ್ರಜಾಪ್ರತಿನಿಧಿ ಸಭೆ

(ನಮ್ಮ ಸ್ವಾಸಾ ಪ್ರತಿನಿಧಿಯಿಂದ)

ಮೈಸೂರು, ಅ 12

ಸಭೆಯಲ್ಲಿ ಆನಂದ

ಶ್ರೀ ಡಿ. ಹೆಚ್. ಚಂದ್ರಶೇಖರಯ್ಯ ನವರು ಅವಸರದ ಕರಾವಿನ ವಿಷಯದಲ್ಲಿ ಸರ್ಕಾರ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿದಾಗ, ಕಾಂಗ್ರೆಸ್ ಪಕ್ಷ ಪಕ್ಷ ಕಂಠದಿಂದ ಹಿಯರ್ ಹಿಯರ್ ಎಂದು ಕೂಗುಹಾಕಿತು.

ಒಂದು ತ್ರಸ್ ಮುಂದುವರಿಸುವಿರಾ 'ಸುಪ್ರದಾಯಾನುಸಾರವಾಗಿ ಶುಕ್ರವಾರ ಮಧ್ಯಾಹ್ನ ನಾವು ಪ್ರಾರ್ಥನೆ ಮಾಡುವ ದಿವಸ. ನಾವು ಪ್ರಾರ್ಥನೆಗೆ ಹೋಗಿರುವ ಸಂದರ್ಭದಲ್ಲಿ ಅನೇಕ ಪ್ರಧಾನ ವಿಷಯಗಳ ಚರ್ಚೆಯಾಗಬಹುದು. ಆದುದರಿಂದ ಸಭೆಯನ್ನು 1 ಗಂಟೆ ಮುಂದುವರಿಸಬೇಕು' ಎಂದು ಚೀಫ್ ವಿಪ್ ನೂರ್‌ಹುಸೇನ್ ಕೋರಿದರು.

ಈ ಕೋರಿಕೆಯನ್ನು ಪತ್ರಿಕೋದ್ಯೋಗಿ ನಂಜುಂಡರಾಯರು ಸಂಪೂರ್ಣವಾಗಿ ವಿರೋಧಿಸಿ ಅದು ಸಾನ್ಯವೇ ಇಲ್ಲವೆಂದು ಭಾಷಣವನ್ನು ಮಾಡಿದರು.

ಭೂಸಾಳಂರವರು ಅದನ್ನು ವಿರೋಧಿಸಿದರು.

ಕಾಂಗ್ರೆಸ ಪಕ್ಷದಬೆಂಬಲ ಕೇಳಿಕೆಗೆ ದೊರೆಯಿತು.

ಮುಂಚಿನ ಸಂಪ್ರದಾಯದಂತೆ ನಡೆಯಲಿ ಎಂದು ಅಧ್ಯಕ್ಷರು ತಿಳಿಸಿದರು.

ಸಭಾ ಪರಿತ್ಯಾಗ

ಸಭೆ ಮುಕ್ತಾಯವಾಗಲು ಮೂರು ನಿಮಿಷಗಳು ಉಳಿದಿದ್ದಾಗ ಚನ್ನಗಿರಿ ಚಿತ್ರದುರ್ಗ ತಾಲ್ಲೂಕುಗಳಲ್ಲಿ ಅಹಾರಧಾನ್ಯದ ಅವಸರದ ಕರಾವು ಚರ್ಚೆಯಾದ ಮೇಲೆ, ಸಭೆಯ ಅಭಿಮತವನ್ನು ಸೂಚಿಸಲು ಅವಕಾಶ ದೊರೆಯಲಿಲ್ಲವೆಂದು ಕಾಂಗ್ರೆಸ್ ಪಕ್ಷ ಅಸಮಾಧಾನದಿಂದ ಸಭಾತ್ಯಾಗ ಮಾಡಿದರು.

ಪತ್ರಿಕೋದ್ಯೋಗಿಗೆ ಬಹುಮಾನ

ರಾಜಧಾನಿಯ ಸುಪ್ರಸಿದ್ಧ ಪತ್ರಿಕೋದ್ಯೋಗಿ ಶ್ರೀಮಾನ್ ಎಸ್. ತ್ರಿಕಂಠಯ್ಯನವರು ಸಿನ್ಹೆ ದಿವಸ ಸಾಯಂಕಾಲ ವಸ್ತು ಪ್ರದರ್ಶನವನ್ನೀಕ್ಷಿಸುವ ಮಕ್ಕಳ ವಿಹಾರದ ಸ್ಥಳದಲ್ಲಿ ಜಟ್ಟಿಯ ಪಾತ್ರವನ್ನು ಸೋಜಿಗದ ರೀತಿಯಲ್ಲಿ ಅತ್ಯುತ್ತಮವಾಗಿ ಅಭಿನಯಿಸಿ ಅಭ್ಯಾಸವಿಲ್ಲದಿದ್ದರು ಅನೇಕ ಪಟ್ಟುಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಒಪ್ಪಿಗೆಗೆ ಪಾತ್ರರಾದರು. ಇದಕ್ಕಾಗಿ ಅವರಿಗೆ ಬಹುಮಾನವು ದೊರೆತಿದೆ.

AT Opera—
From 10–10–45

ರಂಜಕ್, ಟಿ. ಆರ್, ರಾಜಕುಮಾರಿ

ಕೆ. ಎಲ್. ವಿ. ವಸಂತ,

ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows

From 11-10-45

Tarzan Triumphs

ನ್ಯೂ ಕೃಷ್ಣ ಟಾಕೀಸ್

ಮಾರ್ನಿಂಗ್ ಷೋ

ತಾ 11—10—45 ರಿಂದ

"ಬಾಳಾಜಿ"

— ಅಥವಾ —

ತಿರುಪತಿ ವೆಂಕಟೇಶ-ಮಹಾತ್ಮೆ

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Good Printing

L. N. Press

Sriramp st MYSORE

TALK–A–TONE

(Pioneer Film-mag of S. India)

Local Agent—D. Mahadev

Opera Talkies, Mysore

No. R-1-60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋಗಳೂ ಮೊಹಲ್ಲಾ ಸಬ್ ಗೋದಾಮುಗಳೂ ಮತ್ತು ಇತರೇ ರೇಷನ್ ಡಿಪೋಗಳೂ ಸಹ ಇದೇ ಅಕ್ಟೋಬರ್ ತಾಹೆ 15 ನೇ ತಾರೀಖು ಸೋಮವಾರ ಮತ್ತು 16 ನೇ ತಾರೀಖು ಮಂಗಳವಾರ ಮಧ್ಯಾಹ್ನ ಮಾತ್ರ 'ಮಹಾನವಮಿ' ಮತ್ತು 'ವಿಜಯದಶಮಿ' ಪ್ರಯುಕ್ತ ಮುಚ್ಚಲ್ಪಡುತ್ತವೆ ದಸರಾ ಕಾಲದಲ್ಲಿ ಮಂಗಳವಾರ ಬೆಳಿಗ್ಗೆ ಮತ್ತು ಗುರುವಾರ ಮಧ್ಯಾಹ್ನ ಎಲ್ಲಾ ಡಿಪೋಗಳಿಗೂ ಇದ್ದ ಮಾಮೂಲು ರಜವನ್ನು ನಿಲ್ಲಿಸಿರುತ್ತೆ.

(ಸಹಿ) ಟಿ. ವಿ. ರೆಡ್ಡಿ

4–10–45 ರೇಷನಿಂಗ್ ಆಫೀಸರ್

ಮೈಸೂರು ಸಿಟಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸತ್ಯವಾದಿ

ದಿನಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಯ ಎಲ್ಲಾ ಊರುಗಳಲ್ಲೂ ವಿಜಂಬರು ಬೇಕಾಗಿದ್ದಾರೆ. ವಿಷಯಗಳಿಗೆ ಒರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0



ಆ ಮ ಶ ಂ ಕೆ

ಅ ತಿ ಸಾ ರ ಗ ಳಿ ಗೆ

.... ಖಾತ್ರಿ ....

ಗು ಣ ಕಾ ರಿಯಾ ದ

ಡಿಸೆಂಟಿಸೆಡ್

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.

— ಸ್ಟಾಕಿಸ್ಟರು —

ರಘುಲಾಲ್ ಅಂಡ್ ಕೊ.

ಟಿ. ಸಿ. ನಟರಾಜ್ ಅಂಡ್ ಕೊ.

— ಪಂಜುವರರು —

ಕಾಂತರಾಜ್ ಅಂಡ್ ಕೊ.

ರಂಗೇ ಬೀದಿ, ಮೈಸೂರು.

At Ranjit Humayun

6 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ ನರ್ಗಿಸ್,, ಪ್ರಾಣವಾಸ್

ಪಾತ್ರ ವಹಿಸಿರುವರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,

ಮೈ ಸೂ ರು.

ಹ ರಾ ಜು ನೋ ಟೀ ಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12–9–1945 ನೇ ಹರಾಜು ಇಷ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20–10–1945 ರಿಂದ 23–10–1945 ರವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ

ಛೇರ್ಮನ್